ಒಂದಾಣೆ ಮಾಲೆ **203**

ಅಹಲ್ಯೋದ್ಧಾರ

(ಪೌರಾಣಿಕ ಏಕಾಂಕ ನಾಟಕ)

ರಚಯಿತರು:
‘ಅಂಬಾತನಯ,’
ಮುದ್ರಾಡಿ.

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

"ಅಹಲ್ಯೋದ್ಧಾರ"ದ ಕುರಿತು ಎರಡು ಮಾತು.

ರಾಮಾಯಣವು, ಸರ್ವಗುಣಸಂಪನ್ನನಾದ ಪರಿಪೂರ್ಣ ಮನುಷ್ಯನ ಕಥನವಾಗಿದೆ. ಆಳುವವನು ತಾನು ಶ್ರೇಷ್ಠನು ಎಂದೆಣಿಸದೆ, ಜನತೆಯು ಆಳು ಎಂದು ತಿಳಿದು, ಜೀವಧಾರಣೆಗೆ ಅವಶ್ಯವಿದ್ದಷ್ಟು, ಪರಿಮಿತವೆನಿಸುವ ಅನುಪತ್ಯಗಳನ್ನು ಮಾತ್ರ ಇಟ್ಟುಕೊಂಡು, ತಾನು–ತನ್ನದು ಎಂಬುದನ್ನು ಪೂರ್ಣವಾಗಿ ಬಿಟ್ಟುಕೊಟ್ಟು— ಜನತೆಯವನು, ಅವರ ಸೇವಕನು ಎಂಬ ಭಾವನೆಯಿಂದ ನಡಕೊಳ್ಳಬೇಕೆಂಬುದನ್ನು ರಾಮಾಯಣವು ತಿಳಿಯಾಗಿ ಬೋಧಿಸುತ್ತಿದೆ.

ಈ ಅಮರ ಕಥೆಯಲ್ಲಿ, 'ಅಹಲ್ಯೋದ್ಧಾರ'ವು ಒಂದು ಸುಂದರ ಅಧ್ಯಾಯವಾಗಿದೆ. ಅದು, ವಂಚಿಸಲ್ಪಟ್ಟ ಪವಿತ್ರ ನಾರಿಯ ಕರುಣಾಮಯ ಚಿತ್ರ. ಅಹಲ್ಯೆಯ ಪಾವಿತ್ರ್ಯವನ್ನು, ಪರಿಶುದ್ಧನಾದ ಶ್ರೀ ರಾಮನು ಚೆನ್ನಾಗಿ ಬೆಳಕಿಗೆ ಹಿಡಿದನು. ಅವಳು ನಿಜಕ್ಕೂ ಪವಿತ್ರಳೆಂಬುದನ್ನು ಸಾರುವ ಅಧಿಕಾರವು, ಪವಿತ್ರನಾದ ಶ್ರೀ ರಾಮನಲ್ಲೇ ಇತ್ತು. ಮಗುವಿನಂತೆ ನಿಷ್ಕಲಂಕ ಹೃದಯವೂ, ಋಷಿಪುಂಗವನಂತೆ ಪೂರ್ಣ ನಿಸ್ವಾರ್ಥಭಾವವೂ ಉಳ್ಳ ಶ್ರೀ ರಾಮನ ಪಾದರಜವು ಸೋಕುತ್ತಲೇ,— ತನಗರಿಯದೆನೇ ಅಘಟಿತವು ಘಟಿಸಿ ಪತಿಯ ರೋಷಕ್ಕೆ ಪಾತ್ರಳಾಗಿ ಮಾನಸಿಕ ಮಬ್ಬಿನಿಂದ ಶಿಲೆಯಾಗಿದ್ದ ಅಹಲ್ಯೆಯು ಹೊಸ ಜೀವವನ್ನು ಧರಿಸಿದಂತಾಯಿತು. ಅವಳ ಹೃದಯ ಉದ್ಯಾನವು ಪುನಃ ಚಿಗುರಿತು. ಆ ಆಶ್ರಮದಲ್ಲಿ ಪುನಃ ಬೆಳಕು ಹರಡಿತು. ಶ್ರೀ ರಾಮನ ವ್ಯಕ್ತಿತ್ವವು ಬಾಲ್ಯದಲ್ಲೇ ಅಷ್ಟು ಉಜ್ವಲವಿತ್ತು. ಈ ಅಧ್ಯಾಯದ ಸಾರಾಂಶವನ್ನು, ಚಿಕ್ಕ ನಾಟಕವಾಗಿ ಇಲ್ಲಿ ಕೊಡಲಾಗಿದೆ. ಐದು ಪಾತ್ರಗಳು ಮಾತ್ರ ಇರುವ, ರಂಗಸಜ್ಜಿಕೆಯು ವಿಶೇಷವಾಗಿ ಬೇಕಾಗಿಲ್ಲದ ಈ ನಾಟಕವು, ಅರ್ಧ ಗಂಟೆಯೊಳಗೆ ಆಡಬರುವಂತಿದೆ. ಇದು, 'ಒಂದಾಣೆ ಮಾಲೆ'ಯ ಇತರ ನಾಟಕಗಳಂತೇ, ಶಾಲಾ ವಿಶೇಷ ದಿನಗಳಲ್ಲೂ ಸಾಮಾಜಿಕ ಕೂಟಗಳಲ್ಲೂ ಆಡಲು ಯೋಗ್ಯವೂ ಅನುಕೂಲವೂ ಇದೆ.

ಕುಡ್ಪಿ ವಾಸುದೇವ ಶೆಣೈ.

ಅಹಲ್ಯೋದ್ಧಾರ

(ಪೌರಾಣಿಕ ಏಕಾಂಕ ನಾಟಕ)

ಪಾತ್ರಗಳು:

ಶ್ರೀ ರಾಮ. ಲಕ್ಷ್ಮಣ. ವಿಶ್ವಾಮಿತ್ರ. ಅಹಲ್ಯೆ. ಗೌತಮ.

ದೃಶ್ಯ ೧

(ಸ್ಥಳ: ವಿಶ್ವಮಿತ್ರಾಶ್ರಮದ ಹೊರವಲಯ. ಶ್ರೀ ರಾಮ, ಲಕ್ಷ್ಮಣರು ಪ್ರಾತರ್ವಿಧಿಯನ್ನು ಮುಗಿಸಿ ಹಾಸುಗಲ್ಲಿನಲ್ಲಿ ಕುಳಿತು ಪ್ರಕೃತಿಯ ಚೆಲುವಿನಲ್ಲಿ ಸೂರೆ ಹೋಗಿದ್ದಾರೆ. ಹೊಂಬಣ್ಣದ ಹೊಳಹಿನಿಂದ ದಿನಮಣಿ ಮೇಲೇರಿ ಬರುತ್ತಿದ್ದಾನೆ. ಕೊಳದ ಕಮಲಗಳು ಅರಳಿ ಪರಿಮಳಿಸುತ್ತಿವೆ.)

ಶ್ರೀ ರಾಮ: ನೋಡಿದೆಯಾ ಲಕ್ಷ್ಮಣ! ಕುಲುಕುಲು ನಗುತ್ತಿರುವ ಕಮಲಗಳ ಚೆಲುವನ್ನು. ಸೂರ್ಯನುದಯ ತಾವರೆಗೆ ಜೀವಾಳವೆಂಬರು; ಅದೋ, ಪ್ರಭಾಕರನ ಪ್ರಖರತೇಜದ ಪ್ರದ್ಯುತಿಗೆ ಮೊಗ್ಗರಳಿ ಮೋಹಿಸುತ್ತಿದೆ.

ಲಕ್ಷ್ಮಣ: ನಿಜವಣ್ಣಾ! ಸೂರ್ಯನುದಯ ತಾವರೆಗೆ ಜೀವಾಳವಾದಂತೆ, ನಿನ್ನೊಲವು ನನಗೆ ಜೀವಾಳ. ಆದರೆ, ಸೂರ್ಯ ಮುಳುಗುವಾಗ ತಾವರೆ ಮುದುಡಿ ಮುರುಟುವುದು. ನನ್ನಣ್ಣನೊಲವು ಮಾತ್ರ—

ಶ್ರೀ ರಾಮ: ಸದಾ ಉಣ್ಮೆ ಪೊಣ್ಮುತ್ತಿರುವುದು.

ಲಕ್ಷ್ಮಣ: ಧನ್ಯೋಸ್ಮಿ! (ಭಕ್ತಿಯಿಂದ ತಲೆ ಬಾಗುವನು.)

ಶ್ರೀ ರಾಮ: (ಬರಸೆಳೆದು ಬಿಗಿದಪ್ಪಿ) ಸಹೋದರಾ! ನಿನ್ನ ಭಕ್ತಿ ನಿರ್ಭರತೆಯು ನನ್ನನ್ನು ಮೈಮರೆಯುವಂತೆ ಮಾಡುವುದು.

ಲಕ್ಷ್ಮಣ: ಅಣ್ಣ ದೇವಾ! ಅದೋ! ದುಂಬಿವಿಂಡು ತಾ ಮುಂದೆ, ತಾ ಮುಂದೆಯೆಂದು ಓಡೋಡಿ ಬರುತಿಹುದಲ್ಲ. ಅವುಗಳ ಝೇಂಕಾರ ಓಂಕಾರದ ಪ್ರತಿಧ್ವನಿಯಂತಿದೆ.

ಶ್ರೀ ರಾಮ: ಹೌದು, ತಮ್ಮಾ! ನಿನ್ನ ಭಾವನೆಯು ಅರ್ಥಗರ್ಭಿತ ವಾದುದು. ಅತ್ತ ಆಶ್ರಮದಲ್ಲಿ ಮುನಿವಟುಗಳ ಓಂಕಾರ! ಇತ್ತ ಆಶ್ರಮದ ಹೊರವಲಯದ ಉದ್ಯಾನದಲ್ಲಿ ತುಂಬಿಗಳ ಝೇಂಕಾರ! ಆಶ್ರಮವು ಸಮೀಪಿಸಿರುವುದರಿಂದಲೇ, ತುಂಬಿಗಳೂ ಓಂಕಾರವನ್ನೇ ಜಪಿಸುತ್ತ ಬರುತ್ತಿರ ಬಹುದೇನೋ! ನಿನ್ನ ಸಾಮ್ಯವು—ನಿಜವಾಗಿಯೂ ಹಾಸ್ಯವು.

ಲಕ್ಷ್ಮಣ: ಅಣ್ಣಾ, ಅರಮನೆಯ ಸಿರಿಯೊಡೆತನದ ಸುಖೋಪಭೋಗ ಕ್ಕಿಂತಲೂ ಆಶ್ರಮದ ಈ ಜೀವನ ಅದೆಷ್ಟು ಆನಂದ!

ಶ್ರೀ ರಾಮ: ನೀನೆಂದುದು ನಿಜವೆ. ಗುರುಗಳ ಕೃಪಾವಾತ್ಸಲ್ಯ ಹಾಗೂ ಪ್ರಕೃತಿಯ ಸ್ನಿಗ್ಧ ಸುಂದರ ಮೋಹಕತೆ, ನಮ್ಮನ್ನು ಮುಗ್ಧರನ್ನಾ ಗಿರಿಸಿದೆ.

ಲಕ್ಷ್ಮಣ: ನಿಜ, ನಿಜ. ಗುರುಗಳ ಅನುಗ್ರಹ ಹಿರಿದಾದುದು. ಅದಲ್ಲದಿರುತಿದ್ದರೆ ಯಃಕಶ್ಚಿತ್ ಬಾಲಕರಾದ ನಾವು ಮುಖ ಸಂರಕ್ಷಣ ಮಾಡುತ್ತಿದ್ದೆವೆ? ಆ ದುಷ್ಟ ರಕ್ಕಸರಲ್ಲಿ ತೋರಿದ ತೋಳ ಪರ್ಚರಿಕೆಗೆ, ಗುರುಗಳ ಆಶೀರ್ವಾದವೇ ಕಾರಣ.

ಶ್ರೀ ರಾಮ: ಗುರುಗಳ ಅನಾದೃಶ ಪ್ರತಿಭೆಯನ್ನು ತಿಳಿದೇ, ನಮ್ಮ ತಂದೆ ಇಲ್ಲಿಗೆ ಕಳುಹಿಕೊಟ್ಟಿದ್ದಾರೆ. ಇರಲಿ, ಲಕ್ಷ್ಮಣ. ನಿನಗೇನೂ ಮಾತಾಪಿತರ ನೆನಪಾಗುವುದಿಲ್ಲವೇ?

ಲಕ್ಷ್ಮಣ: ನಿನ್ನೊಲವಿನ ಆಸರೆಯಲ್ಲಿರುವ ನನಗೆ, ನಿನ್ನ ನೆನಪಲ್ಲದೆ ಅನ್ಯರಾರದೂ ಆಗಲೊಲ್ಲದು.

ಶ್ರೀ ರಾಮ: 'ಯದ್ಭಾವಂ ತದ್ಭವತಿ.' ನಾವು ಯಾರಲ್ಲಿ ಯಾವ ನಂಬುಗೆಯನ್ನು ಇಡುವೆವೊ ತದನುಗುಣವಾಗಿ ಫಲ ಸಿಗುವುದು. ಹೊಲ ದಲ್ಲಿ ಬಿತ್ತಿದ ಬಿತ್ತನೆಗೆ ಅನುಗುಣವಾಗಿಯಲ್ಲವೇ ಫಲಬರುವುದು?

ಲಕ್ಷ್ಮಣ: ನಿಜವಣ್ಣಾ. ಅದೋ! ಅದಾರು ಇತ್ತ ಬರುತ್ತಿರುವುದು? ಹಾಂ, ಗುರುಗಳು ಇತ್ತ ಬರುತ್ತಿರುವರಣ್ಣಾ. ಹೊತ್ತಾಯಿತೆಂದು ಗದರಿಸು ವರೋ ಏನೋ?

ಶ್ರೀ ರಾಮ: ಇಲ್ಲ ಲಕ್ಷ್ಮಣ. ಬಾಲಕರಾದ ನಾವು ಏನುಮಾಡು ತ್ತಿರಬಹುದೆಂದು ಇತ್ತ ಬರುತ್ತಿರಬಹುದಷ್ಟೆ. ಪ್ರಕೃತಿಯ ಚೆಲುವನ್ನು ನೋಡುತ್ತಾ ನಿಂತೆವೆಂದು ಸತ್ಯ ಸಂಗತಿ ಹೇಳಿದರಾಯಿತು.

ಲಕ್ಷ್ಮಣ: ಒಂದು ವೇಳೆ ಗದರಿಸಿದರೆ....?

ಶ್ರೀ ರಾಮ: ಗದರಿಸಿದರೇನು? ಗುರುಗಳಲ್ಲವೇ?

ಲಕ್ಷ್ಮಣ: ಗುರುಗಳಾದರೇನು? ಗದರಿಸಲೇನು ಅನ್ನ ಕೊಟ್ಟು ಸಾಕಿರುವರೇ?

ಶ್ರೀ ರಾಮ: ಛಿ! ಸುಮ್ಮನಿರು ಹುಚ್ಚಪ್ಪ. ನಿನ್ನದು ಹುಡುಗ ಬುದ್ಧಿ. ಹುಡುಗ ಬುದ್ಧಿ ಎಡವಿ ಬೀಳುವುದು ಸ್ವಾಭಾವಿಕ; ಗದರಿಸಿದರೆ ಬುದ್ಧಿ ಗಾಯಿತು. ಮನೆಯಲ್ಲಿ ತಂದೆ ತಾಯಂದಿರು ಗದರಿಸಿದರೆ ನಾವು ಸಿಟ್ಟುಗೊಳ್ಳುವೆವೆ? ಅಥವಾ ಹಿರಿಯರಿಗೆ ನಮ್ಮ ಮೇಲಿನ ವಾತ್ಸಲ್ಯ ಕಡಿಮೆಯಾಗುವುದೇ? ಹಾಗೆಯೇ ಗುರುಗಳು. ವಿದ್ಯಾಭ್ಯಾಸ ಕಾಲದಲ್ಲಿ ಗುರುಗಳನ್ನು ಮಾತಾಪಿತರೆಂದು ಭಾವಿಸುವುದು ಶಿಷ್ಯಧರ್ಮ.

ಲಕ್ಷ್ಮಣ: ಕ್ಷಮಿಸಣ್ಣಾ. ಗುರುಗಳಿತ್ತಲೇ ಬಂದರು.

ವಿಶ್ವಾಮಿತ್ರ: (ಪ್ರವೇಶ. ಶ್ರೀ ರಾಮ ಲಕ್ಷ್ಮಣರು ವಂದಿಸುವರು.) ಏನು ರಾಮಾ ವಿಲಂಬ?

ಶ್ರೀ ರಾಮ: ತಿರೆಯ ಸೊಬಗನ್ನು ಸವಿಯುತ್ತಾ ನಿಂತೆವು. ಹೊತ್ತಾದುದು ತಿಳಿಯಲೇ ಇಲ್ಲ. ಕ್ಷಮೆಯಿರಲಿ.

ವಿಶ್ವಾಮಿತ್ರ: ಹೋ, ಹಾಗೇನು? ರಾಜವೀಥಿಯಲ್ಲಿ ತಿರುಗಾಡುವ ನಿಮಗೆ, ಈ ಕಾಡು ಗುಡ್ಡದ ಚೆಲುವು ಹಿರಿದಾಯ್ತೆ ಲಕ್ಷ್ಮಣ?

ಲಕ್ಷ್ಮಣ: ಹೌದು, ಗುರುದೇವ! ನರಕೃತಿಯ ಕಲೆಗಳಿಂತಲೂ ಪ್ರಕೃತಿಕಲೆ ಮಿಗಿಲು ಎಂಬುದನ್ನು ನಾನಿಲ್ಲಿ ಅರಿತುಕೊಂಡೆ.

ಶ್ರೀ ರಾಮ: ನನಗೂ ಹಾಗೆಯೇ ಗುರುಗಳೆ.

ವಿಶ್ವಾಮಿತ್ರ: ಸತ್ಯ. ಚಿರಂತನ ಸತ್ಯ. ಮಾನವನಿರ್ಮಿತ ಮಹೋನ್ನತ ಮೋಹಕತೆಗಿಂತಲೂ, ಪ್ರಕೃತಿಯ ಚೇತೋಹಾರಿ ದೃಶ್ಯಗಳು ಅದೆಷ್ಟೋ ರಾಮಣೀಯಕ. ಅದರಲ್ಲೂ ಶ್ರೀ ರಾಮಚಂದ್ರನಿರುವ ಪ್ರದೇಶವು ಅಭಿರಾಮಣೀಯಕವಲ್ಲವೆ?

ಶ್ರೀ ರಾಮ: ಶಿಷ್ಯನೆಂದು ಹೊರಲಾರದ ಹೊರೆಯನ್ನು ಹೊರಿಸುವುದೇ? ಬೆಳೆಯದ ಮುನ್ನ ಕೊಯ್ವರೆ—ಗುರುದೇವ? ತವಕಾರುಣ್ಯ ಜಲದಲ್ಲಿ ಮಿಂದು ಮಡಿಗೊಳ್ಳದಿಹಮುನ್ನ—ದಶರಥ ಸುತ ರಾಮ—ಶ್ರೀ ರಾಮಚಂದ್ರನಾಪನೆ?

ವಿಶ್ವಾಮಿತ್ರ: (ಸ್ವಗತ) ಧನ್ಯ! ಧನ್ಯ! ವಿಶ್ವಾಮಿತ್ರ, ನೀನೇ ಧನ್ಯ! ಶ್ರೀ ರಾಮನಂಥ ವಿಭೂತಿ ಪುರುಷನನ್ನೇ ಶಿಷ್ಯನಂಗಿಂಸಿಕೊಂಡ ನೀನು ನಿಜವಾಗಿ ಧನ್ಯ! (ಪ್ರಕಟ) ರಾಮಾ, ನಿನ್ನ ನಯವಿನಯದ ಮಧುರೋಕ್ತಿಗಳು ನಿನ್ನ ಅಭಿಜಾತ ಸಂಸ್ಕೃತಿಯ ಮೊಗ್ಗು. ಲಕ್ಷ್ಮಣಾ, ಇಂಥ ಅಣ್ಣನನ್ನು ಪಡೆದ ನೀನೂ ಧನ್ಯನಾದೆ!

ಲಕ್ಷ್ಮಣ: ಪೂಜ್ಯರೇ! ತಮ್ಮ ದಿವ್ಯಾನುಭೂತಿ ಸ್ಥಿತಪ್ರಜ್ಞೆಯ ಶಿಷ್ಯತ್ವದಿಂದ ಆದಾರು ತಾನೇ ಕೃತಾರ್ಥರಾಗರು?

ಶ್ರೀ ರಾಮ: ನಿಜವಾದುದನ್ನೇ ಆಡಿದೆ ತಮ್ಮ. ಶಿಷ್ಯರ ಬಾಳಕುಡಿ ಬೆಳಗಬೇಕಾದರೆ, ಹೃದಯ ಪ್ರಣತಿಯಲ್ಲಿ ಗುರುಕೃಪಾತೈಲ ತುಂಬಿರಬೇಕು.

ವಿಶ್ವಾಮಿತ್ರ: ಆಗಲಿ, ಮಕ್ಕಳೆ! ಹೊತ್ತು ಮೀರಿತು. ಆಶ್ರಮಕ್ಕೆ ತೆರಳಿ ಫಲಾಹಾರ ಸ್ವೀಕರಿಸೋಣ! (ಹೋಗುವರು.) ತೆರೆ.

ದೃಶ್ಯ ೨

ಕಾಡುದಾರಿ

(ವಿಶ್ವಾಮಿತ್ರರು ಮುಂದೆ. ಅವರ ಹಿಂದೆ ರಾಮಲಕ್ಷ್ಮಣರು.)

ವಿಶ್ವಾಮಿತ್ರ: ಮಕ್ಕಳೇ, ನಡೆನಡೆದು ದಣಿದಿರೇನು?

ಶ್ರೀರಾಮ: ಇಲ್ಲ ಗುರುದೇವ. ತಾವು ಮುಂದೆ ಹೋಗುವಾಗ ತಮ್ಮ ಪಡಿನೆಳಲು ಹಿಂದೆ ಬರುವುದು. ಆದರೇನು, ನೆರಳುಗೊಂಬದೆ ಆಯಾಸ? ಗುರುದೇವರೇ ಮುಂದಾಗಿ ಹೋಗುತ್ತಿರಲು ಶಿಷ್ಯರಿಗೆಲ್ಲಿಯ ಪ್ರಯಾಸ? ನೋಡಿದನಿತೂ ಸಾಲದೆನಿಸುವ ಪ್ರಕೃತಿದೇವಿಯ ನಂದನೋದ್ಯಾನದಂದ ಒಂದು ಕಡೆ! ಚಂಗನೆ ಚಿಗಿದು ಚಿನ್ನಾಟವಾಡುವ ಮೃಗಸಂಕುಲ ಮತ್ತೊಂದು ಕಡೆ! ಹಾಡಿ ಹೊಗಳುತ್ತಿರುವ ಹಕ್ಕಿಯುಲಿ ಮಾಗುದೊಂದು ಕಡೆ! ಹೀಗಿರುವಾಗ ಅದೆಲ್ಲಿಯ ಆಯಾಸ! ಅದೆಲ್ಲಿಯ ಪ್ರಯಾಸ!

ಲಕ್ಷ್ಮಣ: ನಿಜ, ಗುರುಗಳೇ! ನನಗಂತೂ ಹಕ್ಕಿಯಾಗಿ ಹಾರಲೋ, ಮಿಗವಾಗಿ ಚಿಗಿಯಲೋ ಏನೆಂದೂ ತೋರುವುದಿಲ್ಲ.

ವಿಶ್ವಾಮಿತ್ರ: ಹೌದು ಲಕ್ಷ್ಮಣಾ! ಇಂಥ ಭಾವನೆಯ ಸರ್ವೋತ್ಕೃಷ್ಟ ಸ್ಥಿತಿಯೇ ಜೀವನಾನಂದದ ಆಗರ. ಒಂದು ವಸ್ತುವೇ ತಾನೆಂದು, ಅಥವಾ ತಾನೇ ಅದೆಂದು ಭಾವಿಸುವುದು ಬದುಕಿನ ಆನಂದಕ್ಕೆ ಕಾರಣ.

ಭಕ್ತನು ಪರಮಾತ್ಮನಲ್ಲಿ ಭಾವಪರವಶನಾಗಿ ತಾದಾತ್ಮ್ಯನಾಗುವ ಬಗೆಯೂ ಇದೇ. ಇದರಿಂದಾಗಿ ಸಾಧ್ಯವಿದ್ದಷ್ಟು ಪ್ರಾಪಂಚಿಕ ತಾಪತ್ರಯದಿಂದ ಬಿಡುಗಡೆಯಾಗಲು ಸಾಧ್ಯವಿದೆ. ಹೀಗೆ ಇದರಿಂದ ಲಭಿಸುವ ಸುಖ, ಆನಂದ ಒಂದೇಯಾದರೂ, ಭಕ್ತರದನ್ನು ಪರವಶತೆ ಅಥವಾ ತಾದಾತ್ಮ್ಯವೆನ್ನುವರು. ಸೌಂದರ್ಯಪ್ರಿಯರು, ಸೌಂದರ್ಯೋಪಾಸನೆ ಅಥವಾ ನಿಮಗ್ನತೆಯೆನ್ನುವರು. ಕವಿಗಳು ಭಾವಸಮಾಧಿ ಅಥವಾ ಸಮಾವೇಶವೆನ್ನುವರು. ಕಲಾವಿದರು ಕಲಾತನ್ಮಯತೆಯೆನ್ನುವರು. ಹೀಗೆ ಯಾವ ಹೆಸರಿನಿಂದ ಕರೆದರೂ, ಹಾಗಾಗಲು ಯತ್ನಿಸುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಶ್ರೀರಾಮ: ಗುರುಗಳೇ! ಹೀಗೆ ನಾವು ನಮಗೆ ಹಿತವಾದ; ಸುಖವಾದ ವಸ್ತುಗಳಲ್ಲಿ ಸಮಾವೇಶ ಅಥವಾ ತಾದಾತ್ಮ್ಯಗೊಳ್ಳುವಂತೆ ದೀನದಲಿತರ ಕಷ್ಟಕಾರ್ಪಣ್ಯಗಳಲ್ಲೂ ಹಾಸುಹೊಕ್ಕಾಗಿರಬೇಡವೇ?

ವಿಶ್ವಾಮಿತ್ರ: ನಿಜ ರಾಮ. ಇದೇ ವಿಶ್ವಪ್ರೇಮದ ತಳಹದಿ. ಸುಖದುಃಖಗಳನ್ನು ಸಮನಾಗಿ ಕಾಣುವ--ಐಕ್ಯೈಕ ಮಧುರ ಭಾವವಿದು. ಒಳ್ಳೆಯದರ ಸುಖದಲ್ಲಿ, ಪ್ರಿಯದಲ್ಲಿ—ಸಮಾವೇಶಗೊಳ್ಳುವಂತೆ, ದೀನದಲಿತರ ಕಷ್ಟಕಾರ್ಪಣ್ಯಗಳಲ್ಲೂ ಹಾಸುಹೊಕ್ಕಾಗಿ ಅವರ ಸ್ಥಿತಿಯೇ ತನ್ನದೆಂದು ಭಾವಿಸಿ, ತನ್ನ ಹಾಗೆಯೇ ಅವರಿಗೂ ಬದುಕಿನಲ್ಲಿ ಸಮಾನತೆಯನ್ನು ಒದಗಿಸಿಕೊಡುವ ಸರ್ವಸಮತಾಭಾವವಿದು. ರಾಜರಾದವರು ಇದನ್ನು ಪಾಲಿಸಲೇ ಬೇಕು. ತನ್ನಂತೆ ಪರರ ಬಗೆವುದೇ ಶ್ರೇಷ್ಠ ಧರ್ಮ, ಬದುಕಿನ ಗುರಿ, ಚರಮ ಧ್ಯೇಯ.

ಲಕ್ಷ್ಮಣ: ಗುರುಗಳೇ, ಹಾಗಾದರೆ ಧರೆಯ ಅರಸರೆಲ್ಲರೂ ಈ ಶ್ರೇಷ್ಠ ಧರ್ಮದ ಅನುವರ್ತಿಗಳಾಗಿರುವರೇ?

ವಿಶ್ವಾಮಿತ್ರ: ಇಲ್ಲ ಲಕ್ಷ್ಮಣಾ! ಧರ್ಮದ ಮರ್ಮವನ್ನು ತಿಳಿದು ತಿಳಿದೂ ಅಧರ್ಮದ ಆಚರಣೆಯಲ್ಲಿ ಆಸಕ್ತರಾಗಿದ್ದಾರೆ. ಆದರೆ ಮಿಥಿಲಾ ದೇಶದ ದೊರೆ ಜನಕಮಹಾರಾಜನು ಎಲ್ಲರಿಗೂ ಜನಕನಂತಿದ್ದಾನೆ "ಎಲ್ಲರಂತೆಯೇ ತಾನು ಹೊರತು, ತನ್ನದಾದುದೇನೂ ಇಲ್ಲ" ಎನ್ನುವ ಆ ರಾಜರ್ಷಿ ನಿಜವಾಗಿ ಧರ್ಮತತ್ತ್ವರ ಮಹಾಶಯನು. ಅದ್ದರಿಂದಲೇ ಅದೆಷ್ಟೋ ತಪೋಧನರೂ ಅವನ ದರ್ಶನಾಕಾಂಕ್ಷಿಗಳಾಗಿ ಅಲ್ಲಿಗೆ ಹೋಗುತ್ತಿರುತ್ತಾರೆ.

ಶ್ರೀರಾಮ: ಇಂಥ ತುಂಬಾ ಪ್ರೀತಿಯೇ ರಾಜನೀತಿಯಲ್ಲವೇ ಗುರು ದೇವ!

ವಿಶ್ವಾಮಿತ್ರ: ನಿಜ. ಪ್ರೀತಿಯೇ ಪ್ರೀತಿಯ ದ್ಯೋತಕ. ಶಾಸ್ತ್ರ "ನೀತಿ ನೀತಿ" ಎಂಬುದನ್ನೇ ಧರ್ಮ "ನೀತಿ ನೀತಿ" ಎನ್ನುತ್ತದೆ. ಧರ್ಮದ ನೀತಿ ಯನ್ನೇ ಹೃದಯ "ಪ್ರೀತಿ ಪ್ರೀತಿ" ಎನ್ನುತ್ತದೆ. ಅದನ್ನೆ ರೂಢಿ "ರೀತಿ ರೀತಿ" ಎನ್ನುತ್ತದೆ. ಆದರೆ ಜ್ಞಾನಿಯಾದವನು ಅವೆಲ್ಲವನ್ನೂ ಒಂದೇ ಎಂದು ತಿಳಿಯುತ್ತಾನೆ. ಮುಂದಿನ ರಾಮರಾಜ್ಯದಲ್ಲಿ ಇದೆಲ್ಲವನ್ನೂ ಕಾಣಬಹುದು.

ಶ್ರೀರಾಮ: ಆಗಲಿ, ಗುರುದೇವ! ತಮ್ಮ ಪಾದಸ್ಪರ್ಶದಿಂದ ಮುಂ ದಾವ ಪುಣ್ಯಪ್ರದೇಶವು ಪಾವನವಾಗಲಿರುವುದು?

ವಿಶ್ವಾಮಿತ್ರ: ಹೊ! ಮರೆತೆ. ಮೊದಲೇ ತಿಳಿಸಬೇಕೆಂದಿದ್ದೆ. ಈಗ ಅವಕಾಶ ಸಿಕ್ಕಿತು. ಆ ಜನಕನ ವಿಷಯ ತಿಳಿಸಿದೆನಲ್ಲಾ. ಅವನೊಂದು ಮಹಾ ಯಜ್ಞವನ್ನು ಕೈಗೊಂಡಿರುವನು. ನಿಮ್ಮನ್ನು ಕರೆದುಕೊಂಡು ಆ ರಾಜರ್ಷಿಯ ದರ್ಶನಮಾಡಿಸೋಣ ಎಂದು ಹೊರಟುಬಂದಿರುವೆ.

ಲಕ್ಷ್ಮಣ: ಧನ್ಯರಾದೆವು. ತಮ್ಮ ಕೃಪೆಯಿಂದ ಆ ರಾಜರ್ಷಿಯ ದರ್ಶನಯೋಗವು ನಮಗೆ ಲಭಿಸುವುದು.

ಶ್ರೀರಾಮ: ಗುರುದೇವ, ಮಾತಾಡುತ್ತಾ ಮಾತಾಡುತ್ತಾ ಅದೆಷ್ಟು ದೂರ ಬಂದೆವೋ ತಿಳಿಯಲೇ ಇಲ್ಲ.

ವಿಶ್ವಾಮಿತ್ರ: ದೈಹಿಕ ಶ್ರಮವನ್ನು ಮಾತು ಮರೆಯಾಗಿರಿಸಬಲ್ಲುದು.

ಲಕ್ಷ್ಮಣ: ಪೂಜ್ಯರೇ, ನಮ್ಮ ಮುಂದೆ ತೋರುತ್ತಿರುವ ಸುಂದರ ಪ್ರದೇಶ ಯಾವುದಿದು?

ವಿಶ್ವಾಮಿತ್ರ: ಮಹರ್ಷಿ ಗೌತಮರ ಆಶ್ರಮದ ಒಂದು ಸುಂದರ ದೃಶ್ಯವಿದು.

ಶ್ರೀರಾಮ: ಹೌ! ಹೆಸರು ಕೇಳಿದ ನೆನಪಿದೆ. ಗುರುಗಳೆ, ಅವರ ದರ್ಶನಲಾಭವು ನಮಗೀ ಸಮಯ ಆಗಬಹುದೆ?

ವಿಶ್ವಾಮಿತ್ರ: ಭಗವಂತನಿಚ್ಛೆಯಿದ್ದರೆ ಆಗಿಯೇ ತೀರುವುದು.

ಲಕ್ಷ್ಮಣ: ಗುರುದೇವ! ಅದೊ ಅತ್ತ ನೋಡಿರಿ. ಬಾಲಬಿಸಿಲಿಗೆ ಮೈಯೊಡ್ಡಿದ ಮೃಗದ ಮರಿಯನ್ನು ಹುಲಿಯು ನೆಕ್ಕುತ್ತಿದೆಯಲ್ಲಾ. ಇದೇನಾಶ್ಚರ್ಯ! ಪರಸ್ಪರ ವೈರಿ ಪ್ರಾಣಿಗಳೂ ಕಲೆತು ನಲಿದಾಡುತ್ತಿವೆ.

ಶ್ರೀರಾಮ: ಇತ್ತ ನೋಡಿದಿರಾ! ಹಾವು ಹೆಡೆಯೆತ್ತಿ ಕುಣಿಯುತ್ತಿರುವಾಗ, ನವಿಲು ಗರಿಗೆದರಿ ಅದರ ಜತೆಗೇ ನರ್ತಿಸುತ್ತಿದೆ.

ವಿಶ್ವಾಮಿತ್ರ: ಮಹರ್ಷಿ ಗೌತಮರ ತಪಃಪ್ರಭಾವವಿದು ಮಕ್ಕಳೆ. ತಪದ ಪ್ರತಿಭೆಗೆ ಜಡವು ಚೇತರಿಸಿ ನಲಿಯುಬಲ್ಲದು. ವೈರಿಜಂತುಗಳು ವೈರತ್ವವನ್ನು ಮರೆತು, ವಿಶ್ವಪ್ರೇಮದಿಂದ ಬೆರೆತು, ವಿಶ್ವದೃಷ್ಟಿಯನ್ನೇ ಪಾಲಿಸಬಲ್ಲವು; ತಪಸ್ಸಿನ ಅಗಾಧ ಅವ್ಯಕ್ತ ಅನಂತ ಶಕ್ತಿಗೆ ಏನುಏನಾಗುವುದೆಂದು ಊಹಿಸಲೂ ಸಾಧ್ಯವಿಲ್ಲ. ಅಣುವನ್ನು ಮಹತ್ತಾಗಿ, ಮಹತ್ತನ್ನು ಅಣುವಾಗಿ ಪರಿವರ್ತಿಸಿ, ವ್ಯಷ್ಟಿ ಸಮಷ್ಟಿಗಳನ್ನೇ ತಿರುವುಮುರುವು ಮಾಡಬಲ್ಲ ಅಸೀಮ ಚೈತನ್ಯ ತಪಸ್ಸಿನದು. "ಅರ್ಚಕನ ಭಕ್ತಿಯಿಂದ ಶಿಲೆಯು ಶಂಕರನಾಗುವಂತೆ, ವಿಶ್ವಸಮತಾ ಭಾವನೆಯ ಉಜ್ವಲ ತಪಸ್ಸಿನಿಂದ ಶಾಶ್ವತ ಶಾಂತಿ ಲಭಿಸುವುದು."

ಲಕ್ಷ್ಮಣ: ಗುರುದೇವ! ಅರ್ಚಕನ ಭಕ್ತಿಯಿಂದ ಶಿಲೆಯು ಶಂಕರನಾಗಬಲ್ಲದೆಂದಿರಿ. ಅತ್ತ ನೋಡಿರಿ; ಮಾನುಷಾಕಾರವನ್ನು ಹೊಂದಿರುವ ಶಿಲೆ ಯಾವುದದು? (ಶ್ರೀರಾಮ ಸ್ಮರಣೆಯ ಅವ್ಯಕ್ತ ನಾದವೊಂದು ಕೇಳಿಬರುವುದು. ಲಕ್ಷ್ಮಣ ಆಲಿಸಿ) ಹಾ! ನನ್ನಣ್ಣ ದೇವನ ಸ್ಮರಣೆಯನ್ನಾರೋ ಮಾಡುತ್ತಿರುವಂತೆ ಕೇಳುತ್ತಿದೆಯಲ್ಲಾ?

ಶ್ರೀರಾಮ: ದುಷ್ಟ ದಾನವರ ಪೀಡೆಯಿಂದ ನೊಂದವರ್ಯಾರಾದರೂ ನಮ್ಮನ್ನು ನೆನೆಯುತ್ತಿರಬಹುದೆ ಗುರುದೇವ?

ವಿಶ್ವಾಮಿತ್ರ: ಅಲ್ಲ ರಾಮ. ಪತಿಯಿಂದ ಶಾಪಗ್ರಸ್ಥಶಿಲೆಯಾದ ಅಹಲ್ಯೆ, ಶಾಪದ ವಿಮೋಚನೆಗಾಗಿ ಸ್ಮರಿಸುತ್ತಿದ್ದಾಳೆ.

ಲಕ್ಷ್ಮಣ: ಏನು! ಶಾಪದ ಪ್ರಭಾವವು ಶಿಲೆಯಾಗಿರಿಸಿತೆ? ಹಾಗಾದರೆ ಶಾಪಗ್ರಸ್ಥಳಾದ ತಾಯಿ ಮುನಿಪತ್ನಿಯಾಗಿರಬೇಕು.

ವಿಶ್ವಾಮಿತ್ರ: ನಿಜ, ಲಕ್ಷ್ಮಣ. ತಾಪಸಿಗಳ ಕೋಪದ ತಾಪದ ಶಾಪವು ಪಾಪದ ರೂಪವನ್ನು ತೋರಬಲ್ಲದು. ಆ ತಾಯಿ ಬೇರಾರೂ ಅಲ್ಲ. ಗೌತಮರ ಪತ್ನಿ.

ಶ್ರೀರಾಮ: ಗುರುದೇವ! ಶಾಪಕೊಡಲಾದರೂ ಕಾರಣವೇನು?

ವಿಶ್ವಾಮಿತ್ರ: ಕಾರಣವಿಲ್ಲದೆ ಕ್ರಿಯೆಯುಂಟೆ ಮಕ್ಕಳೆ? ಗೌತಮರು ಆಶ್ರಮದಲ್ಲಿಲ್ಲದ ವೇಳೆಯನು ಕಾದು, ಕಾಮುಕನಾದ ದೇವೇಂದ್ರನು

ಗೌತಮರ ವೇಷವನ್ನು ಧರಿಸಿ ಸಾತ್ವಿಕಳಾದ ಅಹಲ್ಯೆಯನ್ನು ವಂಚಿಸಿದನು. ಇದನ್ನು ತಿಳಿದ ಗೌತಮರು ಅಹಲ್ಯೆಯನ್ನು ಶಿಲೆಯಾಗೆಂದು ಶಪಿಸಿದರು.

ಲಕ್ಷ್ಮಣ: (ಕ್ರೋಧದಿಂದ) ಏನು! ಪಾಶವಿಕ ವೃತ್ತಿಗೆ ಹೇಸದೆ ಮೋಸಗೊಳಿಸಿದ ದೇವೇಂದ್ರನನ್ನುಳಿದು, ಸಾಧ್ವಿಯಾದ ಮಾತೆಗೆ ಶಾಪವೆ? ನ್ಯಾಯವೇ, ಧರ್ಮವೇ, ಸಮ್ಮತವೇ? ಎಲ್ಲಡಗಿದೆ ಪಾಪಿ ದೇವೇಂದ್ರ! (ಬಿಲ್ಲೆತ್ತುವನು).

ವಿಶ್ವಾಮಿತ್ರ: ಸೈರಿಸು ಬಾಲಕಾ! ಕಾಮುಕನಾದ ದೇವೇಂದ್ರನ ದೇಹವಿಡೀ ವ್ರಣಮಯವಾಗುವಂತೆ ಶಪಿಸಿರುವನು.

ಲಕ್ಷ್ಮಣ: ಛೀ! ದೇವೇಂದ್ರ, ನಿನ್ನ ದುರ್ವರ್ತನೆಯ ದುಷ್ಫಲದ ದುರ್ವಾಸನೆಯು ಜಗತ್ತನ್ನೇ ವ್ಯಾಪಿಸಿದೆ! ಬಲ್ಲೆಯಾ ಪಾಪಿ?....ಗುರುಗಳೇ; ತಿಳಿಯದೆ ಮೋಸಹೋದ ಅಹಲ್ಯೆಯನ್ನು ಗೌತಮರು ಶಪಿಸಬಹುದಿತ್ತೇ?

ವಿಶ್ವಾಮಿತ್ರ: ನೀನನ್ನುವುದೂ ನಿಜವೆ; ಆದರೆ, ವಿವೇಚಿಸಿ ನೋಡಿದಲ್ಲಿ ಅಹಲ್ಯೆಯ ಅಜಾಗ್ರತೆಯೂ ಇಲ್ಲದೆ. ಕೊಳೆ ತಾನಾಗಿಯೇ ಮೈಮೇಲೆ ಬಂದು ಬಿದ್ದರೂ ಅದನ್ನು ತೊಳೆದು ಮಡಿಗೊಳ್ಳುವುದು ಧರ್ಮ.

ಶ್ರೀರಾಮ: ಗುರುದೇವ! ಶಾಪ ವಿಮೋಚನೆಯ ಬಗೆಯಾದರೂ ಹೇಗೆ?

ವಿಶ್ವಾಮಿತ್ರ: ಗೌತಮರು ಕನಲಿ ಮುನಿಯುತ್ತಲೇ ಅಹಲ್ಯೆ ತಿಳಿಯದೆ ನಡೆದುದನ್ನು ವಿಜ್ಞಾಪಿಸಿ ಕ್ಷಮಿಸಬೇಕೆಂದು ಪರಿಪರಿಯಾಗಿ ವಿಜ್ಞಾಪಿಸಿಕೊಂಡಳು. ಸ್ವಲ್ಪ ಸಮಾಧಾನ ತಂದುಕೊಂಡ ಗೌತಮರು, "ನೀನು ಶಿಲೆಯಾಗಿ ಬಿದ್ದ ಕೆಲಕಾಲದಲ್ಲಿ ಶ್ರೀರಾಮನು ಈ ಮಾರ್ಗವಾಗಿ ಬರುವನು. ಅವನ ಪಾದರಜ ಸೋಕಲು, ನೀನು ಮುನ್ನಿನಂತಾಗುವೆ"—ಎಂದರು. ಅಂದಿನಿಂದಾಕೆ ನಿನ್ನ ನಾಮಸ್ಮರಣೆಯಲ್ಲೇ ಕಾಲಕಳೆಯುತ್ತಿರುವಳು.

ಲಕ್ಷ್ಮಣ: ಅಣ್ಣದೇವಾ! ಇನ್ನು ವಿಲಂಬಮಾಡುವುದು ತರವಲ್ಲ.

ಶ್ರೀರಾಮ: ಗುರುದೇವ! ಹಾಗಾದರೆ, ಪಾದರಜವನ್ನು ಸೋಕಿಸಲೆ?

ವಿಶ್ವಾಮಿತ್ರ: ಹಾಗೆಯೇ ಮಾಡಿ ಅಹಲ್ಯೆಯನ್ನುದ್ಧರಿಸು.

ಶ್ರೀರಾಮ: (ಶಿಲೆಯ ಬಳಿ ಬಂದು ಭಕ್ತಿಭಾವದಿಂದ ಬಾಗಿ) ತಾಯೆ! ನಿನ್ನ ಪತಿಯ ವಾಕ್ಯದಂತೆ ನನ್ನಿಂದಾಗಿ ಶಾಪ ವಿಮೋಚನೆಯಾಗಬೇಕಾಗಿದೆ. ಆದರೆ ನನ್ನ ಯೋಗ್ಯತೆಯ ಕಿರಿತನದ ಅರಿವು ನನಗಿದ್ದೇ ಇದೆಯಮ್ಮಾ. ಅತ್ತ ನಿನ್ನ ಪತಿಯ ವಾಕ್ಯ. ಇತ್ತ ಗುರುಗಳ ಅನುಜ್ಞೆ,

ಅವೆಲ್ಲಕ್ಕಿಂತಲೂ ನಿನ್ನ ನೊಂದ ಬಾಳು. ಅದು ಕಾರಣ ನನ್ನ ಪಾದರಜವನ್ನು ಸೋಕಿಸುವೆ ನಿನ್ನ ಕಂದನೀ ರಾಮನೆಂದು ಬಗೆದು ಮೊಗದೋರು ತಾಯೆ!

ಅಹಲ್ಯೆ: (ಪಾದರಜ ಸೋಕಲು ಎದ್ದು ನಮಿಸಿ) ಶ್ರೀರಾಮ! ಪುಣ್ಯವಿಶೇಷ ನಾಮ! ಭವಭಯ ವಿರಾಮ! ಭೋಗಭಾಗ್ಯಾಂಬುಧಿ ಸೋಮ! ಶಾಪವಿಮೋಚನರಾಮ! ಹೇ ದಯಾನಿಧೆ! ನಿನ್ನ ಅನುಗ್ರಹದಿಂದ ಪಾವನಳಾದೆ. ರಕ್ಷ ರಕ್ಷ ಶ್ರೀರಾಮ.

(ಎರಗುವಳು. ರಾಮ ಲಕ್ಷ್ಮಣರು ಗುರುಗಳನ್ನೇ ನೋಡುತ್ತ ನಿಂತಿರುವರು.)

ವಿಶ್ವಾಮಿತ್ರ: ಎದ್ದೇಳು ಸಾಧ್ವೀಮಣಿ! ನಿನ್ನ ಹಾಗಿನ ಪತಿತರ ಉದ್ಧಾರಕ್ಕಾಗಿಯೇ ಶ್ರೀರಾಮನ ಜನನವಾಗಿದೆ. ಆದರೂ ಲೋಕ ವ್ಯವಹಾರದಲ್ಲಿ ಅವನಿನ್ನೂ ಕಿರಿಯನು. ಅದುಕಾರಣ ನಿನ್ನ ಕರುಣೆಯ ಕಂದನೆಂದೇ ಭಾವಿಸಿ ಪ್ರಿಯಮಾತುಗಳಿಂದ ಮಾತಾಡು. ಇದೊ! ಇವನೇ ಅವನನುಜ ಲಕ್ಷ್ಮಣ. ಶರೀರದ ಛಾಯೆಯಂತೆ ಅಣ್ಣನನ್ನೇ ಅನುಸರಿಸುತ್ತಿದ್ದಾನೆ. ತಾಯೆ! ನಿನ್ನ ಶಾಪವು ಜಗತ್ತಿಗೊಂದು ಮಹಾ ಪಾಠವಾಗಿದೆಯೇ ಹೊರತು ಅದರಿಂದಾರಿಗೂ ಕೆಡುಕಾಗಿಲ್ಲ. ನಿನ್ನ ಬಾಳು ಮತ್ತೂ ಬೆಳಗಿತು. ನೀನಿನ್ನು ಪತಿಯ ಜತೆಯಲ್ಲಿ ಬಾಳಿ ಮುಂದಿನ ಜನಕೆಗೆ ದಾರಿ ಬೆಳಕಾಗು.

ಅಹಲ್ಯೆ: ಪೂಜ್ಯರೇ, ವಿಶ್ವಕ್ಕೇ ಮಿತ್ರರಾಗಿ, ವಿಶ್ವಾಮಿತ್ರರೆನಿಸಿದ ನೀವು, ಶ್ರೀರಾಮ ಲಕ್ಷ್ಮಣರನ್ನೇ ಶಿಷ್ಯರಾಗಿ ಪಡೆದು ನನ್ನ ಉದ್ಧಾರಕ್ಕೆ ನೆರವಾದಿರಿ. ಇಲ್ಲೇ ಸಮೀಪ ನನ್ನ ಪತಿದೇವರ ಆಶ್ರಮವಿರುವುದರಿಂದ ನೀವೆಲ್ಲರೂ ಅಲ್ಲಿ ತನಕ ಬಂದು ನಮ್ಮನ್ನು ಸಂತಸಗೊಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ಲಕ್ಷ್ಮಣ: ಸಂತೋಷ ಗುರುಗಳೆ! ಆ ಶಾಪ ದೇವೇಂದ್ರನನ್ನು ಸಹ ಷಂಡನನ್ನಾಗಿ ಮಾಡಿದ ಮಹರ್ಷಿಗಳು ಹೇಗಿರುವರೋ ನೋಡೋಣ!

ಅಹಲ್ಯೆ: ಹೌದು; ನೀವೆಲ್ಲರೂ ಬರಲೇಬೇಕು.

ಶ್ರೀರಾಮ: ಆಗಲಿ, ತಾಯಿ!

ವಿಶ್ವಾಮಿತ್ರ: ಬನ್ನಿರಿ ಮಕ್ಕಳೆ! ತಾಯಿಯ ಇಚ್ಛೆಯಂತಾಗಲಿ.

(ಹೋಗುವರು.) (ತೆರೆ)

ದೃಶ್ಯ ೩

ಗೌತಮರ ಆಶ್ರಮ

ಗೌತಮ: (ಗೌತಮರು ಧ್ಯಾನಾಸಕ್ತರಾಗಿರುವರು. ಅವರ ಕಣ್ಮುಂದೆ ಶ್ರೀರಾಮ ಚಲಿಸಿದಂತಾಗುವುದು. ಕಣ್ಣುಜ್ಜಿ ಆಶ್ಚರ್ಯದಿಂದ) ಅಹಾ! ಶ್ರೀರಾಮಚಂದ್ರ! ನನ್ನ ಮನೆಗೆ ಬರುವಿಯೆಂದು ಹೇಳಿಹೋದೆಯಾ? ಶಾಪಗ್ರಸ್ಥಳಾದ ಅಹಲ್ಯೆಯ ಉದ್ಧಾರ ಮಾಡಿದೆಯಾ? ನಿಜ, ನಿಜ. ಅಹಲ್ಯೆಯ ಶಾಪ ವಿಮೋಚನೆಯಾಯ್ತು. ಶ್ರೀರಾಮ-ಲಕ್ಷ್ಮಣರು ಗುರು ವಿಶ್ವಾಮಿತ್ರರೊಂದಿಗೆ ಇತ್ತಲೇ ಬರುತ್ತಿರುವರು. ಧನ್ಯ! ಧನ್ಯ! ಶ್ರೀರಾಮನಾಗಮದಿಂದೀ ಆಶ್ರಮವು ಪಾವನವಾಗಲಿರುವುದು. (ಈಕ್ಷಿಸಿ) ಹೋ! ಬಂದೇ ಬಂದರು!

(ಶ್ರೀರಾಮ, ಲಕ್ಷ್ಮಣ, ವಿಶ್ವಾಮಿತ್ರರು ಬರುವರು. ಅಹಲ್ಯೆ ಬಂದವಳೇ ಪತಿಗೆರಗುವಳು). ಎದ್ದೇಳು ಸಾಧ್ವಿ! ಬಂದೆಯಾ ರಾಮಚಂದ್ರ! ವಿಶ್ವಾಮಿತ್ರರೇ, ನಿಜವಾಗಿಯೂ ಭಗವಂತನನ್ನೇ ಶಿಷ್ಯನನ್ನಾಗಿರಿಸಿಕೊಂಡ ನೀವು ಧನ್ಯರು. ಲಕ್ಷ್ಮಣ ಹೀಗೆ ಬಾ. ಎಲ್ಲರೂ ಕುಳಿತುಕೊಳ್ಳಿರಿ.

ಶ್ರೀರಾಮ: (ಕುಳಿತುಕೊಂಡನಂತರ) ಪೂಜ್ಯರೇ, ತಮ್ಮ ದರ್ಶನದಿಂದ ನಮಗೆ ಅತುಲ ಆನಂದವಾಯ್ತು.

ಲಕ್ಷ್ಮಣ: ನನಗೂ ಹಾಗೆಯೇ.

ಗೌತಮ: ಅಣ್ಣತಮ್ಮರ ಜೋಡಿ ಅನ್ಯಾದೃಶವಾದುದು.

ವಿಶ್ವಾಮಿತ್ರ: ಗೌತಮರೆ, ತ್ರಿಕಾಲಜ್ಞಾನಿಗಳಾದ ತಮಗೆ ಹೇಳಬೇಕಾದುದೇನೂ ಇಲ್ಲ. ಶ್ರೀರಾಮನಿಂದಾಗಿ ಅಹಲ್ಯೋದ್ಧಾರವಾಯ್ತು.

ಗೌತಮ: ನಿಜ. ನನ್ನ ಶಾಪದಿಂದ ಅಹಲ್ಯೆ ಪಾವನಳಾದಳು. ಕಾಮುಕನಿಕೆ ತಕ್ಕ ಶಾಸ್ತಿಯಾಯ್ತು. ಜನತೆಗೊಂದು ಪಾಠವಾಯ್ತು.

ಶ್ರೀರಾಮ: ಆ—ದ—ರೆ— ಈ ರಾಮನ ಬಾಳು ಮಾತ್ರ—

ಗೌತಮ: ಜನತೆಗೆ ಅರಿವಾಯ್ತು.

ಶ್ರೀರಾಮ: ಇಲ್ಲ, ಪೂಜ್ಯರೆ. ಮಹಾಮಾತೆಯ ಪುಣ್ಯ ದೇಹಕ್ಕೆ ಪಾದರಜ ಸೋಕಿಸಬೇಕಾಯಿತಲ್ಲಾ ಎಂದು ಮನಮರುಗುತ್ತಿದೆ.

ಗೌತಮ: ಇಲ್ಲ, ರಾಮ. ನಿನ್ನ ಪ್ರತಿಯೊಂದು ಮಾತೂ ಶ್ರೀರಾಮನು ವಿಭೂತಿ ಪುರುಷನೆಂಬುದನ್ನೇ ಸಾರುತ್ತಿವೆ. ಶ್ರೀರಾಮನು ಭುವನಾಭಿ

ರಾಮನೆಂಬುದಕ್ಕೆ ಅಹಲ್ಯೋದ್ಧಾರವೇ ಸಾಕ್ಷಿಯಾಗಿದೆ. ನಿನ್ನ ಗುರುಗಳನ್ನೇ ಕೇಳಿ ನೋಡು.

ವಿಶ್ವಾಮಿತ್ರ: ನಿಜ ಗೌತಮರೆ. ಶ್ರೀರಾಮನು ಜಗದ್ವಂದ್ಯ ವಿಭೂತಿಯೆನ್ನಲು ಸಂಶಯವಿಲ್ಲ. ಆದರೆ, ಅವನ ವಿನಯ ಅದನ್ನೊಪ್ಪಲು ಸಿದ್ಧವಿಲ್ಲ.

ಗೌತಮ: ಹೌದು. ಅದರಿಂದಲೇ ತಿಳಿದುಕೊಳ್ಳಬಹುದು. ತಿಳಿದು ತಿಳಿದೂ ತಿಳಿಯದವರಂತೆ ತಿಳಿಸಿಕೊಂಬವನೇ ತಿಳಿದವನು. ದೊಡ್ಡ ದೊಡ್ಡ ಪವಾಡ ಕೃತ್ಯಗಳನ್ನೆಸಗಿಯೂ ಹೆಡ್ಡನೆನಿಸಿಕೊಂಬವನು ದೊಡ್ಡವನು.

ಶ್ರೀರಾಮ: ತಮ್ಮಾ, ಗುರುಗಳಿಬ್ಬರೂ ನನ್ನ ಮೇಲೆ ಹೊರಲಾರದ ಹೊರೆಯನ್ನೇ ಹೊರಿಸುತ್ತಿದ್ದಾರೆ. ಅವರ ಅನುಗ್ರಹವಿಲ್ಲದಿರುತ್ತಿದ್ದರೆ ನನ್ನಿಂದೇನಾಗುತ್ತಿತ್ತು?

ಲಕ್ಷ್ಮಣ: ಹೌದಣ್ಣಾ! ಗುರುಗಳ ಅನುಗ್ರಹದಿಂದಲೇ ಶಿಷ್ಯರಲ್ಲಿಯ ಸುಪ್ತಚೇತನ ವಿಕಾಸಗೊಂಡು ಬೆಳಕು ಕಾಣುವುದು.

ಅಹಲ್ಯೆ: ಹೌದು; ಲಕ್ಷ್ಮಣ! ಶ್ರೀರಾಮನ ಸ್ವಯಂ ಪ್ರತಿಭೆಯನ್ನು ನಾವೆಲ್ಲಾ ಕಂಡಿದ್ದೇವೆ

ಲಕ್ಷ್ಮಣ: ತಾಯಿ, ನನ್ನನ್ನು ಲಕ್ಷ್ಮಣನೆನ್ನುವ ಬದಲು ಮಗು ಎನ್ನಬಾರದೆ?

ಶ್ರೀರಾಮ: ನನ್ನನ್ನೂ ಹಾಗೆಯೇ ಅಮ್ಮಾ.

ವಿಶ್ವಾಮಿತ್ರ: ಹೌದಮ್ಮಾ. ಹೆಣ್ಣು ಲೋಕಜನನಿ. ಅವಳು ಕಿರಿಯರನ್ನು 'ಮಗು' ಎಂದು ಕರೆದರೇನೇ ಚೆನ್ನು.

ಅಹಲ್ಯೆ: ನೀವೂ ಹಾಗೆನ್ನುವಿರಾ? ಆಗಲಿ; ಮಕ್ಕಳಿಗೆ ತಾಯಿ ಅಕ್ಷತೆಯಿಟ್ಟು ಆರತಿ ಬೆಳಗಬಹುದಲ್ಲವೇ?

ವಿಶ್ವಾಮಿತ್ರ: ತಂದೆ ತಾಯಂದಿರಿಗೆ, ಗುರು ಹಿರಿಯರಿಗೆ ಆ ಅಧಿಕಾರ ಇದ್ದೇ ಇದೆ.

ಗೌತಮ-ಅಹಲ್ಯೆ, ಧನ್ಯರಾದೆವು.

ಶ್ರೀರಾಮ: ಆಗಲಿ ತಮ್ಮಾ. ತಾಯಿಯ ಇಚ್ಛೆಯಂತಾಗಲಿ.

(ಆರತಿ ಎತ್ತಿ ಬೆಳಗುತ್ತಿರಲು, ತೆರೆ ಬೀಳುವುದು.)

— ಮಂಗಲ —

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1958ನೇ ಸಪ್ಟಂಬರ ತಿಂಗಳ ಎರಡನೆಯ ವಾರದ ವರೆಗೆ 203 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

203 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4062 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS. CAR STREET. MANGALORE-1.

ನೆರೆಯ ರಾಜ್ಯ ಕೇರಳದಲ್ಲಿ....

[ತಾ. 24 ಅಗೋಸ್ತು 1958ರಂದು]

ಕೈಮಗ್ಗದ ಬಟ್ಟೆ ಮತ್ತು ಪ್ಲೈವುಡ್ ತಯಾರಿಕೆಯ ಕೈಗಾರಿಕೆಗಳಿಗೆ ಪ್ರಸಿದ್ಧವಾಗಿದೆ ಕೇರಳದ ಕಣ್ಣಾನೂರು. ಆರ್ಥಿಕ ವ್ಯವಹಾರದಲ್ಲಿ, ಕೈಗಾರಿಕೆಯಲ್ಲಿ ಕುಶಲರಾದ ಸರಳ ಜೀವನಕ್ಕೆ ಪ್ರಸಿದ್ಧಿ ಹೊಂದಿದ ಈ ಭಾಗದ ಜನರಿಗೆ ಆದರ್ಶ ಆರ್ಥಿಕ ಸೇವೆಯನ್ನು ನೀಡಬೇಕೆಂಬ ಉತ್ತಮ ಉದ್ದೇಶದಿಂದ ಸಿಂಡಿಕೇಟ್ ಬೇಂಕಿನ ಶಾಖೆಯೊಂದು ಇಪ್ಪತ್ತೈದು ವರ್ಷಗಳ ಹಿಂದೆ ಇಲ್ಲಿ ಸ್ಥಾಪಿಸಲ್ಪಟ್ಟಿತು.

ಅಂದಿನಿಂದ ಆ ಭಾಗದ ಕೇರಳೀಯರ ಪ್ರೀತಿ ಆದರಗಳಿಗೆ ಪಾತ್ರವಾಗಿ, ಅವರ ಸುಖದುಃಖಗಳಲ್ಲಿ ಸಹಭಾಗಿಯಾಗಿ ಮರೆಯಲಾಗದ ಸೇವೆಯನ್ನು ಸಲಿಸುತ್ತಾ ಬಂದು ಇದೇ ಅಗೋಸ್ತು ಇಪ್ಪತ್ತನಾಲ್ಕರಂದು ತನ್ನೀ ಇಪ್ಪತ್ತೈದು ವರುಷಗಳ ಸಫಲ ಸೇವೆಯ ಸ್ಮರಣೆಗಾಗಿ, ತನ್ನ ಗ್ರಾಹಕರ ಸಂತೃಪ್ತಿಗಾಗಿ ಬೆಳ್ಳಿಹಬ್ಬವನ್ನು ತಲಚೇರಿಯ ಬಿಶಪರಾದ ರೈಟ್ ರೆವರೆಂಡ್ ಡಾ! ಸೆಬೆಸ್ಟಿನ್ ವಳ್ಳೋಪಿಳ್ಳಿಯವರ ಅಧ್ಯಕ್ಷತೆಯಲ್ಲಿ ಸೊಗಸಾಗಿ ಆಚರಿಸಿತು. ಕೇರಳದಲ್ಲಿರುವ ನಮ್ಮ 13 ಶಾಖೆಗಳೂ ದಕ್ಷಿಣ ಭಾರತದಲ್ಲಿನ ಇತರ 100 ಶಾಖೆಗಳೂ ತಮ್ಮ ಸಹ ಸಂಸ್ಥೆಯಾದ ಕಣ್ಣನೂರು ಶಾಖೆಯ ಫಲಭರಿತ ಸೇವೆಗಾಗಿ ಅಭಿನಂದಿಸುವುವಲ್ಲದೆ "ಅತ್ಯುತ್ತಮ ಬೇಂಕಿಂಗ್ ಸೇವಾ" ಪ್ರತಿಜ್ಞೆಯನ್ನು ಪುನರುಚ್ಚರಿಸುವೆವು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಉಡುಪಿ (ದ. ಭಾ.)

Edited, Printed & Published by K. V. Shenoy
at the Prabhat Printers, Ltd., Mangalore.